7. **ಗಮನ ಸೆಳೆಯುವ ಸೂಚನೆಗಳು**

ಅ. ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಮೆರಿಟ್ ಆಧಾರದ ಮೇಲೆ ತುಂಬುವ ಸೀಟುಗಳಲ್ಲಿ ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಜಿಲ್ಲಾವಾರು ಪಿ.ಯು.ಸಿ. ವಿದ್ಯಾರ್ಥಿಗಳ ಅನುಪಾತದ ಮೇಲೆ ಸೀಟು ನಿಗದಿ.

+ ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಉಪಾಧ್ಯಕ್ಷರೆ, ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಮೆರಿಟ್ ಆಧಾರದ ಮೇಲೆ ತುಂಬುವ ಸೀಟುಗಳಲ್ಲಿ ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಜಿಲ್ಲಾವಾರು ಪಿ.ಯು.ಸಿ. ವಿದ್ಯಾರ್ಥಿಗಳ ಅನುಪಾತದ ಮೇಲೆ ಸೀಟು ನಿಗದಿಪಡಿಸದಿರುವ ಬಗ್ಗೆ ನಾನು ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) (ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಉಪಾಧ್ಯಕ್ಷರೆ, ವೈದ್ಯಕೀಯ; ದಂತ ಮತ್ತು ತಾಂತ್ರಿಕ ಶಿಕ್ಷಣ ಪ್ರವೇಶಕ್ಕಾಗಿ ಅಭ್ಯರ್ಥಿ ಆಯ್ಕೆ ನಿಯಮಾವಳಿಗಳನ್ನು ಪ್ರಸ್ತುತ ಶಿಕ್ಷಣ ಇಲಾಖೆಯಲ್ಲಿ ರೂಪಿಸಲಾಗುತ್ತದೆ. ಮೆರಿಟ್ ಆಧಾರದ ಮೇಲೆ ತುಂಬುವ ಸೀಟುಗಳಲ್ಲಿ ಆಗುತ್ತಿರುವ ಪ್ರಾದೇಶಿಕ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರದ ನೀತಿ ನಿರೂಪಣೆ ಅವಶ್ಯಕವಾಗಿದೆ. ಹಾಲಿ ಇರುವ ನಿಯಮಗಳ ಪ್ರಕಾರ ಸದರಿ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ ಮತ್ತು ಅಭ್ಯರ್ಥಿಗಳ ಆಯ್ಕೆಯನ್ನು ಸಾಮಾನ್ಯ ಪ್ರವೇಶ ಘಟಕದ ಮೂಲಕ ನಿರ್ವಹಿಸಲಾಗುತ್ತಿದೆ. ಈ ಘಟಕದ ಮೂಲಕ ಕೇವಲ ವೈದ್ಯಕೀಯ ಮತ್ತು ದಂತ ಕೋರ್ಸುಗಳಿಗಲ್ಲದೆ ತಾಂತ್ರಿಕ ಕೋರ್ಸ್‌ಗಳಿಗೂ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಈ ಘಟಕವು ಶಿಕ್ಷಣ ಇಲಾಖೆಯ ಮೇಲ್ವಿಚಾರಣೆಯಲ್ಲಿರುವುದರಿಂದ ಸದರಿ ಇಲಾಖೆಯಿಂದ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಕಳೆದ ಅಧಿವೇಶನದ ಸಮಯದಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎನ್ನುವಂಥ ಉತ್ತರ ಕೊಟ್ಟಿದ್ದರು. ಆನಂತರ ನಾವು ತೀವ್ರವಾಗಿ ಒತ್ತಾಯಿಸಿದ ಬಳಿಕ ಮುಂದಿನ ಶೈಕ್ಷಣಿಕ ವರ್ಷದಿಂದ ಇದನ್ನು ಜಾರಿಗೊಳಿಸುತ್ತೇವೆಂಬ ಖಚಿತ ಭರವಸೆಯನ್ನು ಸ್ವತಃ ವೈದ್ಯಕೀಯ ಶಿಕ್ಷಣ ಸಚಿವರೇ ನನಗೆ ಕೊಟ್ಟಿದ್ದಾರೆ. ಆದರೂ ಪುನಃ ನಾವು ಸಿ.ಇ.ಟಿ. ಎಕ್ಸಾಮಿನೇಶನ್ ಸಮಯದಲ್ಲಿ ಕೇಳುವುದು, ನಿಯಮ ರೂಪಿಸಿಲ್ಲವೆಂದು ನೀವು ಹೇಳುವುದು, ಇದಕ್ಕಾಗಿ ಮತ್ತೆ ಒಂದು ದಿವಸ ಮುಂದಕ್ಕೆ ಹೋಗುವುದು ಇದು ಆಗಬಾರದೆನ್ನುವುದಕ್ಕೆ ಮೂರು ತಿಂಗಳುಗಳ ಮೊದಲೇ ನಾನು ತಮ್ಮ ಗಮನ ಸೆಳೆಯುತ್ತಿದ್ದೇನೆ. ಇದಕ್ಕೆ ಅಗತ್ಯವಾಗಿರತಕ್ಕ ನಿಯಮಗಳನ್ನು ಬದಲಾಯಿಸಿ ಮುಂದಿನ ಶೈಕ್ಷಣಿಕ ವರ್ಷದೊಳಗೆ ಮೆಡಿಕಲ್, ದಂತ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ, ಅವರೇನು ಪಿ.ಯು.ಸಿ.ಗೆ ಕುಳಿತುಕೊಳ್ಳುತ್ತಾರಲ್ಲ. ಅದರ ಅನುಪಾತದ ಮೇಲೆ ಎಲ್ಲಾ ಜಿಲ್ಲೆಗಳಲ್ಲೂ ಸಮನಾಗಿ ಮೆರಿಟ್ ಮತ್ತು ಪೇಮೆಂಟ್ ಸೀಟು ಸೀಗುವಂಥ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

+ ಡಾ: ಎಂ. ಶಂಕರ್‌ನಾಯಕ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಹೋದ ಅಧಿವೇಶನದ ಸಮಯದಲ್ಲಿ ದಂತ ಮತ್ತು ವೈದ್ಯಕೀಯ ಶಿಕ್ಷಣದ ಬಗ್ಗೆ ವಿಶ್ವವಿದ್ಯಾನಿಲಯದ ಅನ್ವಯ, ಜಿಲ್ಲಾವಾರು, ವಿಭಾಗವಾರು ಆಗಬೇಕೆಂದು ಬೇಡಿಕೆ ಇತ್ತು. ಆದರೆ ಈಗ ಎಲ್ಲಾ ವಿಶ್ವವಿದ್ಯಾನಿಲಯಗಳು ಒಂದಾಗಿದೆ. ನಮ್ಮಲ್ಲಿ ಇರತಕ್ಕ 236 ಮೆಡಿಕಲ್ ಮತ್ತು ಪ್ಯಾರಾ ಮೆಡಿಕಲ್‌ನ್ನು ಸೇರಿಸಿ 236 ಕಾಲೇಜುಗಳನ್ನು ಸೇರಿಸಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯವೆಂದು ಮಾಡಿದ್ದಾರೆ. ಅವರು ಜಿಲ್ಲಾವಾರು ಸೀಟು ಹಂಚಿಕೆಯಾಗಬೇಕೆಂದು ಕೇಳುತ್ತಿದ್ದಾರೆ. ಇದು ಕೇವಲ ದಂತ ಮತ್ತು ವೈದ್ಯಕೀಯ ಸೀಟುಗಳಿಗೆ ಸಂಬಂಧಪಟ್ಟಿದಲ್ಲ. ಇಂಜಿನಿಯರಿಂಗ್ ಆಗಲಿ ಅಥವಾ ಬೇರೆ ಸ್ನಾತಕೋತ್ತರ ವಿಭಾಗದ ಯಾವುದೇ ಒಂದು ಕೋರ್ಸ್‌ನಲ್ಲಿ ಸೀಟನ್ನು ಅಲಾಟ್ ಮಾಡುವಾಗ, ಇದನ್ನು ಜಿಲ್ಲಾವಾರು, ವಿಭಾಗವಾರು ಮಾಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನೀತಿ ನಿರೂಪಣೆಯಾಗಬೇಕಾಗುತ್ತದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗುತ್ತದೆ. ಇದರ ಬಗ್ಗೆ ತಕ್ಷಣಕ್ಕೆ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ. ಇದರ ಬಗ್ಗೆ ಶಿಕ್ಷಣ ಇಲಾಖೆಯ ಮುಂದೆ ಪ್ರಸ್ತಾವನೆಯನ್ನು ಇಟ್ಟಿದ್ದೇವೆ. ಅವರ ಅಭಿಪ್ರಾಯ ಇನ್ನೂ ಬಂದಿಲ್ಲ. ಅದು ಬಂದ ಮೇಲೆ ಅದನ್ನು ಪರಿಗಣಿಸುತ್ತೇವೆಂದು ನಾನು ಹೋದ ಸಲದ ಅಧಿವೇಶನದಲ್ಲಿ ಹೇಳಿದ್ದೆ. ಈ ವರ್ಷದ ಸಿ.ಇ.ಟಿ. ಕೌನ್ಸ್‌ಲಿಂಗ್ ಹೋದ ತಿಂಗಳು 28ನೇ ತಾರೀಖು ಮುಗಿದಿದೆ. ದಂತ ಕಾಲೇಜುಗಳದ್ದು ಕೌನ್ಸಿಲಿಂಗ್ ಮುಗಿದು ಕೇವಲ ಎಂಟು ದಿವಸಗಳಾಗಿದೆ. ಬರುವ ವರ್ಷದಿಂದ ಅದನ್ನು ಪರಿಗಣಿಸುತ್ತೇವೆಂದು ಹೇಳಿದ್ದೇವು. ಅದಕ್ಕೆ ಸ್ವಲ್ಪ ಕಾಲಾವಕಾಶಕೊಟ್ಟರೆ ಇದನ್ನು ಸರ್ಕಾರದ ಮುಂದಿಟ್ಟು ಅದಕ್ಕೆ ಏನು ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡುತ್ತೇವೆ. ಇದರಲ್ಲಿ ಕೇವಲ ದಂತ ಮತ್ತು ವೈದ್ಯಕೀಯ ಎರಡು ವಿಚಾರ ಮಾತ್ರ ಸೇರಿಲ್ಲ ಇದರಲ್ಲಿ ಇಂಜಿನಿಯರಿಂಗ್ ಆಗಿರಬಹುದು, ಪಾಲಿಟೆಕ್ನಿಕ್ ಆಗಿರಬಹುದು, ಬೇರೆ ಪೋಸ್ಟ್ ಗ್ಯಾಜ್ಯುಯೇಟ್ಸ್‌ದು ಆಗಿರಬಹುದು ಇವೆಲ್ಲವೂ ಸಹ ಅದರಲ್ಲಿ ಒಳಪಡುತ್ತದೆ. ಆದ್ದರಿಂದ ಅದಕ್ಕೆ ನೀತಿ ನಿರೂಪಣೆಯಾಗಬೇಕಾಗುತ್ತದೆ. ಅದನ್ನು ಮಾಡಲು ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಹೋದ ಅಧಿವೇಶನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆಗ ತಾವು ನನಗೆ ಖಚಿತವಾದ ಭರವಸೆಯನ್ನು ಕೊಟ್ಟಿದ್ದೀರಿ. ಅದೇನೆಂದರೆ, ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆಯೆಲ್ಲಾ ನಡೆದಿರುವುದರಿಂದ, ಈ ವರ್ಷ ಇದನ್ನು ಜಿಲ್ಲಾವಾರು ಮಾಡುವುದಕ್ಕೆ ಬರುವುದಿಲ್ಲ. ಮುಂದಿನ ವರ್ಷದಿಂದ ಜಾರಿಗೆ ತರುತ್ತೇವೆ ಎಂದು ಹೇಳಿದ್ದೀರಿ. ಅದಕ್ಕೆ, ಅಧ್ಯಕ್ಷರು 1997-98ನೇ ಇಸವಿಯಲ್ಲಾದರು ಮಾಡಲಿಬಿಡಿಯೆಂದು ನನಗೆ ಹೇಳಿದ್ದಾರೆ. ಮತ್ತೆ ಇನ್ನೂ ಇದರ ಬಗ್ಗೆ ವಿಚಾರ ಮಾಡಬೇಕೆಂದರೆ ಹೇಗೆ?

ಡಾ: ಎಂ. ಶಂಕರನಾಯಕ್:- ಮಾನ್ಯ ಉಪಾಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಈ ವರ್ಷ ಅಡ್ಮಿಷನ್‌ಗಳು ನ್ಯಾಯಾಲಯದ ಮೂಲಕ ತಡವಾಗಿ ಆಗಿ, ಮೊನ್ನೆ ತಾನೆ ಅದರ ಪ್ರಕ್ರಿಯೆ ಮುಗಿದಿದೆ. ಮುಂದಿನ ವರ್ಷದ ಶೈಕ್ಷಣಿಕ ವರ್ಷವು ಜೂನ್, ಜುಲೈನಲ್ಲಿ ಆಗುತ್ತದೆ.

ಉಪಾಧ್ಯಕ್ಷರು:- ಅವರು ಹೇಳುವುದೇನೆಂದರೆ, ತಾವೇ ಕೊಟ್ಟ ಮಾತಿನಂತೆ ಉಳಿಸಿಕೊಳ್ಳಿಯೆಂದು.

ಡಾ: ಎಂ. ಶಂಕರನಾಯಕ್:- ಉಪಾಧ್ಯಕ್ಷರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇದನ್ನು ಪರಿಗಣಿಸಲಾಗುತ್ತದೆಯೆಂದು ಹೇಳಿದ್ದೆವು.

ಉಪಾಧ್ಯಕ್ಷರು:- ಪರಿಗಣಿಸಲಾಗುತ್ತದೆಂದು ಹೇಳಿದ್ದಿರೆಂದಲ್ಲ, ತಾವು ನಿರ್ಧಿಷ್ಟವಾಗಿ ಹೇಳಿದ್ದೀರೆಂದು ಹೇಳುತ್ತಾರೆ, ತಾವು ನಿರ್ಧಿಷ್ಟವಾಗಿ ಉತ್ತರವನ್ನು ಕೊಡಿ.

ಶ್ರೀ ಡಿ.ಆರ್. ಪಾಟೀಲ್:- ತಾವು ಮುಂದಿನ ಶೈಕ್ಷಣಿಕ ವರ್ಷದಿಂದ ಅದನ್ನು ಜಾರಿಗೊಳಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಿರಿ. ಸಿ.ಇ.ಟಿ. ಪರೀಕ್ಷೆ ನಡೆದಾಗ ಇದನ್ನು ತಮ್ಮ ಗಮನಕ್ಕೆ ತಂದರೆ, ತಾವು ರೂಲ್ಸ್ ಆಗಿಲ್ಲ, ಅಮೆಂಡ್‌ಮೆಂಟ್ ಆಗಿಲ್ಲವೆಂದು ತಾವು ನೆಪವನ್ನು ಹೇಳಬಹದು ಎಂದು ಫೆಬ್ರವರಿಯಲ್ಲೆಯೇ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಈ ಅಧಿವೇಶನದಲ್ಲಾದರು ಅಥವಾ ಮುಂದಿನ ಅಧಿವೇಶನದಲ್ಲಾದರೂ ಕಾನೂನಿಗೆ ತಿದ್ದುಪಡಿಯನ್ನು ತಂದು ಮುಂದಿನ ಶೈಕ್ಷಣಿಕ ವರ್ಷದಿಂದ ಇವೆಲ್ಲವೂ ಜಿಲ್ಲಾವಾರು ಸಿಗುವಂತೆ ತಾವು ಮಾಡಬೇಕು.

ಉಪಾಧ್ಯಕ್ಷರು:- ಅವರು ಹೇಳುವುದರಲ್ಲಿ ಸತ್ಯವಿದೆ. ತಾವು ನಿರ್ಧಿಷ್ಟವಾಗಿ ಉತ್ತರವನ್ನು ಹೇಳಬೇಕು.

ಡಾ: ಎಂ. ಶಂಕರನಾಯಕ್:- ಮಾನ್ಯ ಉಪಾಧ್ಯಕ್ಷರೆ, ಅಖಿಲ ಭಾರತ ಮಟ್ಟದಲ್ಲಿ ಪ್ರವೇಶ ಪರೀಕ್ಷೆ ನಡೆಯುತ್ತಿದೆ. ಕರ್ನಾಟಕದಲ್ಲಿ ಪ್ರವೇಶ ಪರೀಕ್ಷೆ ಮಾಡಿ ಸಿ.ಇ.ಟಿ. ಮೂಲಕ ಸೀಟ್ ಹಂಚಿಕೆಯಾಗುವುದು ತಮಗೆಲ್ಲರಿಗೂ ಗೊತ್ತಿದೆ. ಈ ವರ್ಷದ ಶೈಕ್ಷಣಿಕ ವರ್ಷಮುಗಿದು ಕೇವಲ ಎಂಟು ದಿವಸಗಳು ಆಗಿದೆ. ಮುಂದಿನ ವರ್ಷದ ಶೈಕ್ಷಣಿಕ ವರ್ಷ ಜೂನ್, ಜುಲೈನಲ್ಲಿ ಬರುತ್ತದೆ. ಅದಕ್ಕೆ ಸಾಕಷ್ಟು ಕಾಲಾವಕಾಶವಿದೆ. ಜಿಲ್ಲಾವಾರು ಮಾಡುವುದು ಸೂಕ್ತವೆಂದು ನಮಗೂ ಅನ್ನಿಸಿದೆ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸರಿಯಾಗಿ ಸೀಟು ಹಂಚಿಕೆಯಾಗುತ್ತಿಲ್ಲವೆಂಬುದು ಎಲ್ಲರ ಅನಿಸಿಕೆಯಾಗಿದೆ. ಬೆಂಗಳೂರಿನಲ್ಲಿರುವವರಿಗೆ ಹೆಚ್ಚು ಸೀಟು ಸಿಗುತ್ತಿದೆಯೆಂದು ನಮ್ಮೆಲ್ಲರ ಅನಿಸಿಕೆಯಾಗಿದೆ. ಹಿಂದಿನ ಶೈಕ್ಷಣಿಕ ವರ್ಷವನ್ನು ಮೊನ್ನೆತಾನೆ ಮುಗಿಸಿದ್ದೇವೆ, ಮುಂದಿನ ವರ್ಷವನ್ನು ಮುಂದಿನ ಅಧಿವೇಶನದಲ್ಲಿ ತರಲು ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ತಾವು ನಮ್ಮ ಭಾಗದವರು, ತಾವು ನಮ್ಮ ಹಿತರಕ್ಷಣೆ ಮಾಡಬೇಕು.

ಉಪಾಧ್ಯಕ್ಷರು:- ತಾವು ಈ ಹಿಂದೆ ಭರವಸೆಯನ್ನು ಕೊಟ್ಟಿದ್ದೀರಿ. ನಾವು ಈಗ ಫೆಬ್ರವರಿ ತಿಂಗಳಿನಲ್ಲಿದ್ದೇವೆ. ಸಾಕಷ್ಟು ಕಾಲಾವಕಾಶವಿದೆ, ಮುಂದಿನ ವರ್ಷದಿಂದ ಇದನ್ನು ಮಾಡುತ್ತೇವೆಂದು ಖಚಿತವಾಗಿ ಹೇಳಿ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಇವರು ಮತ್ತು ಎಂ.ಪಿ. ಪ್ರಕಾಶ್‌ರವರು ಈಗಾಗಲೇ ಈ ಸದನದಕ್ಕೆ ಉಚಿತವಾಗಿ ಭರವಸೆಯನ್ನು ಕೊಟ್ಟಿದ್ದಾರೆ. ಆಗ ಮಾನ್ಯ ಅಧ್ಯಕ್ಷರು ಮುಂದಿನ ವರ್ಷದಿಂದ ಇದನ್ನು ಮಾಡುತ್ತಾರೆ, ತಾವು ಕುಳಿತುಕೊಳ್ಳಿಯೆಂದು ನನ್ನನ್ನು ಕೂರಿಸಿದ್ದರು. ಆದರೆ ತಾವು ಇನ್ನೂ ಪರಿಶೀಲನೆ ಮಾಡಬೇಕು, ವಿಚಾರ ಮಾಡಬೇಕೆಂದು ನೂರೆಂಟು ವಿಷಯಗಳನ್ನು ಹೇಳಿದರೆ ಹೇಗೆ? ಉಪಾಧ್ಯಕ್ಷರೆ ನಾವು 1985ರಲ್ಲಿ ಕಡಪಟ್ಟಿ ವರದಿಯನ್ನು ತಂದಿದ್ದವು, ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಈ ಬದಲಾವಣೆ ಮಾಡುತ್ತೇವೆಂಬುದಕ್ಕೆ ತಾವು ಸಹ ಹಿಂದೆ ಧ್ವನಿಯನ್ನು ಗೂಡಿಸಿದ್ದಿರಿ. ಹೋದ ಸಿ.ಇ.ಟಿ.ಯಲ್ಲಿ ಬೆಂಗಳೂರು ಅರ್ಬನ್‌ಗೆ 781, ರಾಯಚೂರಿಗೆ 69, ಬಿಜಾಪುರಕ್ಕೆ 111, ಗುಲ್ಬರ್ಗಕ್ಕೆ 105, ಬೆಂಗಳೂರು ಸುತ್ತಮುತ್ತಲಕ್ಕೆ ಹೆಚ್ಚು, ಬೆಂಗಳೂರಿನಿಂದ ದೂರ ಇರುವುದಕ್ಕೆ ಕಡಿಮೆ ಸೀಟುಗಳಾಗಿದೆ. ಆದರ ಬಗ್ಗೆ ನಾವು ಹೇಳಿದಾಗ ಮುಂದಿನ ಶೈಕ್ಷಣಿಕ ವರ್ಷದಿಂದ ಇದನ್ನು ಜಾರಿಗೆ ತರುತ್ತೇವೆಂಬ ಅವರು ಭರವಸೆಯನ್ನು ಕೊಟ್ಟಿದ್ದರು. ಆದರ ಬಗ್ಗೆ ಮತ್ತೆ ವಿಚಾರಮಾಡುವುದೇನಿದೆ? ಆ ಭರವಸೆಗೆ ಅನುಗುಣವಾಗಿ ತಾವು ಕಾನೂನಿನಲ್ಲಿ, ನೀತಿ ನಿಯಮಗಳಲ್ಲಿ ಏನಾದರು ಬದಲಾವಣೆ ಮಾಡುವುದಿದ್ದರೆ, ಈ ಅಧಿವೇಶನದಲ್ಲಿ ಮಾಡಿ ಅಥವಾ ಮುಂದಿನ ಬಜೆಟ್ ಅಧಿವೇಶನದಲ್ಲಾದರು ಮಾಡಿ. ಆದರೆ ಸಿ.ಇ.ಟಿ. ಯಾದಾಗ ಇನ್ನು ನಿಯಮವಾಗಿಲ್ಲ, ಈ ವರ್ಷ ಆಗುವುದಿಲ್ಲವೆಂದು ಹೇಳಿ ಅನ್ಯಾಯವಾಗಬಾರದು. ಆದ್ದರಿಂದ ನಾನು ತಮ್ಮ ಗಮನವನ್ನು ಸೆಳೆದಿದ್ದೇನೆ.

ಡಾ: ಎಂ ಶಂಕರನಾಯಕ್:- ಉಪಾಧ್ಯಕ್ಷರೆ, ಅವರು ಸೀಟ್‌ನಲ್ಲಿ ತಾರತಮ್ಯವಾಗಿದೆಯೆಂದು ಹೇಳುತ್ತಿದ್ದಾರೆ. ಬೆಂಗಳೂರಿನ ಸುತ್ತಮುತ್ತಲಿನವರಿಗೇನು ಜಾಸ್ತಿ ಸೀಟು ಸಿಕ್ಕಿಲ್ಲ. ಬೆಂಗಳೂರು ಗ್ರಾಮಾಂತರಕ್ಕೆ ಬಿಜಾಪುರ, ಗುಲ್ಬರ್ಗಾಗಿಂತ ಕಡಿಮೆಯೇ ಸಿಕ್ಕಿರುವುದು. ಮಂಡ್ಯ, ಕೋಲಾರ ಮತ್ತು ಬಿಜಾಪುರಕ್ಕೆ ಕಡಿಮೆಯೆ ಸಿಕ್ಕಿದೆ. ಆದರ ಬಗ್ಗೆ ಅಂಕಿ ಅಂಶವನ್ನು ಹೋದ ಅಧಿವೇಶನದಲ್ಲಿ ನಾನು ಕೊಟ್ಟಿದ್ದೇನೆ. ಬೆಂಗಳೂರು ಗ್ರಾಮಾಂತರ ಡೆಂಟಲ್ ಮತ್ತು ಮೆಡಿಕಲ್ ಎರಡೂ ಸೇರಿ ಕೇವಲ ನೂರು ಸೀಟು ಸಿಕ್ಕಿದೆ. ಬೆಂಗಳೂರು ಅರ್ಬನ್ 781, ಬೆಳಗಾಂ 118, ಬಳ್ಳಾರಿ 144, ಬಿಜಾಪುರ 111, ಬಾಕಿ ಜಿಲ್ಲೆಗಳನ್ನು ಹೋಲಿಸಿದಾಗ ಬೆಂಗಳೂರು ಗ್ರಾಮಾಂತರವಾಗಲಿ, ಅಥವಾ ಸುತ್ತಮುತ್ತವಾಗಲಿ ಹೆಚ್ಚು ಕೊಟ್ಟಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಮಂಡ್ಯಕ್ಕೆ ಕೇವಲ 78 ಇದೆ. ಜಿಲ್ಲಾವಾರು ವಿದ್ಯಾರ್ಥಿಗಳ ಪ್ರಾತಿನಿಧ್ಯದ ಮೇರೆ, ಮೆರಿಟ್‌ಮೇಲೆ ಸೀಟು ಸಿಕ್ಕಿದೆ. ಆದರೆ ಅವರು ಹೇಳತಕ್ಕದ್ದು ಬೆಂಗಳೂರಿಗೆ ಮಾತ್ರ ಬಹಳಷ್ಟು ಸೀಟುಗಳು ಸೀಮಿತವಾಗಿದೆ, ಬೇರೆ ಕಡೆ ಸಿಗುವುದಿಲ್ಲವೆಂಬುದಾಗಿದೆ. ಆದರೆ ಇದರ ಬಗ್ಗೆ ಧೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಬೇರೆ ರಾಜ್ಯಗಳಲ್ಲಿ ಅದರಲ್ಲೂ ಮಹಾರಾಷ್ಟ್ರದಲ್ಲಿ ಈ ರೀತಿ ಜಿಲ್ಲಾವಾರು, ವಿಶ್ವವಿದ್ಯಾನಿಲಯವಾರು ಸೀಟುಗಳ ಹಂಚಿಕೆ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅದರ ಬಗ್ಗೆ ಮಾಹಿತಿ ತರಿಸಲು ಹೇಳಿದ್ದೇವೆ. ಇದಕ್ಕೆ ಅನಂತರ ನ್ಯಾಯಾಲಯದ ಅಡೆತಡೆ ಬರುತ್ತದೆ, ಕಾನೂನು ತಜ್ಞರನ್ನು ಕೇಳಬೇಕಾಗುತ್ತದೆ, ಆದ್ದರಿಂದ ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಮುಂದಿನ ಶೈಕ್ಷಣಿಕ ವರ್ಷದೊಳಗೆ ಇನ್ನೊಂದು ಅಧಿವೇಶನ ಬರುತ್ತಿದೆ. ಇದು ಇವತ್ತಿಗೇ ಮುಗಿದುಹೋಗಿಲ್ಲ.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಜಿಲ್ಲೆಯಾಗಿ ಯೂನಿಟ್‌ನ್ನು ತೆಗೆದುಕೊಳ್ಳಬೇಕು. ಈಗ ರಾಜ್ಯ ಯೂನಿಟ್ ಆಗಿ ತೆಗೆದುಕೊಂಡಿರುವುದರಿಂದ ಈ ರೀತಿಯಾಗುತ್ತಿದೆ. ಅದನ್ನು ಜಿಲ್ಲಾ ಯೂನಿಟ್ ಎಂದು ಮಾಡಿಕೊಳ್ಳಬೇಕು, ಆಗ ಮಾತ್ರ ಶೇಖಡಾವಾರು ಸರಿಯಾಗುತ್ತದೆ. Now, the State has been taken as a Unit instead of the District.

ಡಾ: ಎಂ. ಶಂಕರನಾಯಕ್:- ಉಪಾಧ್ಯಕ್ಷರೆ, ಕೊಡಗು ಜಿಲ್ಲೆ ಬಹಳ ಚಿಕ್ಕದು, ಅದನ್ನು ಧಾರವಾಡ ಜಿಲ್ಲೆಗೆ ಹೋಲಿಸಲು ಆಗುತ್ತದೆಯೆ? ಆಗ ಜನಸಂಖ್ಯೆಯ ಆಧಾರದ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:- ಜನಸಂಖ್ಯೆಯ ಆಧಾರದ ಮೇಲೆಯೇ ಕೊಡಿ. ತಾವು ಜನಸಂಖ್ಯೆಯ ಆಧಾರದ ಮೇಲೆ, ಪಿ.ಯು.ಸಿ.ಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿಯಾದರೂ ಕೊಡಿ.

ಶ್ರೀ ಹೆಚ್. ಶಿವಪ್ಪ:- ಸ್ಟೇಟ್ ಆಗಿ ಒಂದು ಯೂನಿಟ್ ಆಗಿ ತೆಗೆದುಕೊಂಡರೆ ಎಲ್ಲರಿಗೂ ಸರಿಯಾದ ಪ್ರಮಾಣದಲ್ಲಿ ಸಿಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ವೈದ್ಯಕೀಯ ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯ ಎರಡೂ ಒಂದೇ ಇದೆ. ಆದ್ದರಿಂದ ವಿಶ್ವವಿದ್ಯಾನಿಲಯವಾರು ಮಾಡಲು ಬರುವುದಿಲ್ಲ. ಆದ್ದರಿಂದ ಜಿಲ್ಲಾವಾರು ಇಲ್ಲವೆ ವಿಭಾಗವಾರು ಮಾಡಿಸಿ. ಒಟ್ಟಿನಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಇದನ್ನು ಮಾಡುತ್ತೇವೆಂದು ಹೋದ ಅಧಿವೇಶನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು:- ತಾವು ಹೇಳಿರುವ ಮಾತಿನಂತೆ ನಡೆಯಿರಿ ಎಂದು ಅವರು ಹೇಳುತ್ತಿದ್ದಾರೆ.

ಡಾ: ಎಂ. ಶಂಕರನಾಯಕ್:- ಮಾನ್ಯ ಉಪಾಧ್ಯಕ್ಷರೆ, ಮುಂದಿನ ಶೈಕ್ಷಣಿಕ ವರ್ಷಕ್ಕೆಂದು ನಾನು ಹೇಳಿದೆ. ಈಗಿನ ಶೈಕ್ಷಣಿಕ ವರ್ಷವು ಮೊನ್ನೆತಾನೆ ಮುಗಿದಿದೆ. ಸಂಪೂರ್ಣವಾಗಿ ಅದು ಇನ್ನೂ ಮುಗಿದಿಲ್ಲ. ಕೋರ್ಟಿನಿಂದ ಇನ್ನೊಂದು ಕಾಲೇಜಿಗೆ ಮತ್ತೆ ನಲವತ್ತು ಸೀಟ್‌ಗಳನ್ನು ಕೊಡಬೇಕೆಂದು ಆದೇಶ ಬಂದಿದೆ. ನಮ್ಮ ಅಡ್ಮಿಷನ್‌ಗಳು ಇದುವರೆಗೂ ಮುಗಿದಿಲ್ಲ. ದಂತ ಮತ್ತು ವೈದ್ಯಕೀಯಕ್ಕೆ ಸಂಬಂಧಪಟ್ಟಂತೆ ಒಂದೇ ಒಂದು ವಿಶ್ವವಿದ್ಯಾನಿಲಯವಿದೆ. ಆದರೆ ಇಂಜಿನಿಯರಿಂಗ್ ಕಾಲೇಜಿಗೆ ಸಂಬಂಧಪಟ್ಟಂತೆ ಎಲ್ಲಾ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೂ ಬರುತ್ತದೆ. ತಕ್ಷಣಕ್ಕೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ. ಮುಂದಿನ ಅಧಿವೇಶನದಲ್ಲಿ ಇದನ್ನು ಮಂಡಿಸುತ್ತೇವೆ. ಅದರ ಬಗ್ಗೆ ಚರ್ಚೆಯಾಗಲಿ. ನಂತರ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ, ಸರ್ಕಾರವೇನು ತೀರ್ಮಾನ ತೆಗೆದುಕೊಳ್ಳುತ್ತದೆ ಅದನ್ನು ತೆಗೆದುಕೊಳ್ಳಲಿ.

ಶ್ರೀ ಡಿ.ಆರ್. ಪಾಟೀಲ್:- ಉಪಾಧ್ಯಕ್ಷರೆ, ಸರ್ಕಾರ ಹಿಂದೆ ಕೊಟ್ಟ ಭರವಸೆಗೆ ಮತ್ತೆ ಚರ್ಚೆಯಾಗಲಿಯೆಂದರೆ ನನಗಂತು ಅರ್ಥವಾಗುತ್ತಿಲ್ಲ. ಅಂದು ಮಾನ್ಯ ಪ್ರಕಾಶರವರೂ ಇದ್ದರು.

ಅವರು ನೆನಪು ಮಾಡಿಕೊಂಡರೆ ಒಳ್ಳೆಯದು. ಆಗ ಅಧ್ಯಕ್ಷರು ಮಧ್ಯ ಪ್ರವೇಶಿಸಿ, ಮುಂದಿನ ವರ್ಷದಿಂದ ಮಾಡುತ್ತಾರೆ, ಈ ವರ್ಷ ಮಾಡಲು ಆಗುವುದಿಲ್ಲ ಕುಳಿತುಕೊಳ್ಳಿ ಎಂದಿದ್ದಕ್ಕೆ ನಾನು ಕುಳಿತುಕೊಂಡೆ. ನಿಮ್ಮ ಭರವಸೆ ಇದೆ, ಅಂದು ನೀವು ಈಗಾಗಲೇ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆ ನಡೆದಿರುವುದರಿಂದ, ಈ ವರ್ಷ ಇದನ್ನು ಮಾಡಲು ಬರುವುದಿಲ್ಲ, ಮುಂದಿನ ವರ್ಷದಿಂದ ಜಾರಿಗೆ ತರುತ್ತೇವೆ ಎಂದಿದ್ದೀರಿ. ಅಧ್ಯಕ್ಷರು: 1997-98ನೇ ಇಸವಿಯಲ್ಲಾದರು ಮಾಡಲಿ ಬಿಡಿ ಎಂದಿದ್ದಾರೆ. ಆದ್ದರಿಂದ ನಾನು ಕುಳಿತುಕೊಂಡೆ. ಈಗ ಅದನ್ನು ಮಾಡಲಿಕ್ಕೆ ಬೇಕಾದಂಥ ನಿಯಮಗಳನ್ನೇದಾರು ಬದಲಾವಣೆ ಮಾಡುವುದಿದ್ದರೆ ಮಾಡಿದ್ದೀರ ಮುಂದಿನ ಅಧಿವೇಶನದಲ್ಲಿ ಮಾಡಿ ಎಂದು ಅವರ ಗಮನ ಸೆಳಯುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಉಪಾಧ್ಯಕ್ಷರೇ, ಈ ಹಿಂದೆ ಈ ವಿಚಾರದಲ್ಲಿ ಪ್ರಾದೇಶಿಕ ಅಸಮಾನತೆಗಳು ಬಹಳ ಆಗುತ್ತಿವೆ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರು ಗಮನ ಸೆಳೆದಾಗ, ಶ್ರೀಮಾನ ದಿವಂಗತ ಕಡಪಟ್ಟಿಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಲಾಗಿತ್ತು. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲಿಕ್ಕಾಗಿ ಶ್ರಿ ಕಡಪಟ್ಟಿಯವರು ಕೆಲವು ಸೂತ್ರಗಳನ್ನು ಮಾಡಿ ಕೊಟ್ಟಿದ್ದರು. ಅದನ್ನು ಬಹಳ ಗಂಭೀರವಾಗಿ ಸರ್ಕಾರ ಪರಿಗಣಿಸಿರುವುದರಿಂದ ಈ ಪ್ರಶ್ನೆ ಹಿನ್ನಲೆಯಲ್ಲಿ ಅದನ್ನು ಒಪ್ಪಿ ಮುಂದಿನ ಶೈಕ್ಷಣಿಕ ವರ್ಷದಲ್ಲಾದರೂ ಕೂಡ ಈ ಅಸಮಾನತೆಯನ್ನು ಸರಿಪಡಿಸಬಹುದು ಎನ್ನತಕ್ಕಂತಹ ವಿಚಾರ ಇಲ್ಲಿ ಚರ್ಚೆಗೆ ಒಪ್ಪಿದ್ದಾಗಿದೆ. ಮಾನ್ಯ ಸಚಿವರು ಹಾಗೂ ಸರ್ಕಾರವೂ ಕೂಡ ಇದರ ಬಗ್ಗೆ ತೀವ್ರವಾಗಿ ಗಮನ ಹರಿಸುತ್ತದೆ. ಅದನ್ನು ಬಗೆಹರಿಸಲಿಕ್ಕೆ ಮಾನ್ಯ ಸಚಿವರು ನಿಮ್ಮನ್ನೆಲ್ಲಾ ಕರೆದು ಒಂದು ಸಭೆಯನ್ನು ನಡೆಸಿ ಮಾತನಾಡಿ ಪ್ರಾಯಶಃ ನೀವು ಹೇಳಿದಂತೆ ಈ ಒತ್ತಡದ ಹಿನ್ನೆಲೆಯಲ್ಲಿ ಬೇಗನೇ ಆಗತಕ್ಕಂಥಾದ್ದು ಕೂಡ ಒಳ್ಳೆಯದು ಎಂದು ನಾನು ನಿಮ್ಮ ಜೊತೆಗೆ ಸಹಮತ ವ್ಯಕ್ತಪಡಿಸುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್:- ಮಾನ್ಯ ಉಪಾಧ್ಯಕ್ಷರೇ, ಕೇವಲ ಕಳೆದ ವರ್ಷದಿಂದ ಮಾತ್ರ ಈ ರೀತಿಯ ತಾರತಮ್ಯವಾಗುತ್ತಿಲ್ಲ, ಅನೇಕ ವರ್ಷಗಳಿಂದ ಈ ರೀತಿ ಪ್ರಾದೇಶಿಕ ಅಸಮಾನತೆ ಉಂಟಾಗಿದ್ದು, ಇದನ್ನು ಸರಿಪಡಿಸಬೇಕು ಎಂದು ಮಾನ್ಯ ಪಾಟೀಲರು ಕೇಳಿದ್ದಕ್ಕೆ, ಸರ್ಕಾರದವರು ಸರಿಯಾದ ಉತ್ತರ ಕೊಟ್ಟಿದ್ದಾರೆ, ಮುಂದಿನ ವರ್ಷ ಪ್ರಾರಂಭ ಮಾಡೋಣ, ಅದು ಸರಿ ಇದೆ ಎಂದು ಸರ್ಕಾರ ಸಹಿತ ಅದರ ಬಗ್ಗೆ ಹೇಳುತ್ತಿದೆ. ನಾವು ಹೇಳುವುದೇನೆಂದರೆ, ಏನಾದರೂ ತಿದ್ದುಪಡಿ ಮಾಡುವುದಿದ್ದಾರೆ ಮುಂದಿನ ಅಧಿವೇಶನದಲ್ಲಿ ಮಾಡಿ... ಈಗಂತೂ ತರಲಿಕ್ಕೆ ಆಗುವುದಿಲ್ಲ...

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ತರುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಚಂದ್ರಕಾಂತ್ ಬೆಲ್ಲದ್:- ಮುಂದಿನ ಅಧಿವೇಶನದಲ್ಲಿ ತಾವು ಸಂಬಂಧಿಸಿದ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ಜಿಲ್ಲಾವಾರು ಅಸಮಾನತೆಯನ್ನು ತಡೆಗಟ್ಟುವಂತಹ ದೃಷ್ಟಿಯಿಂದ, ತಾವು ಜಿಲ್ಲಾವಾರು ಪ್ರಪೋರ್ಶನೇಟ್ ಕೊಡಬೇಕು, ಆ ದಿಸೆಯಲ್ಲಿ ಸನ್ಮಾನ್ಯ

ಸಚಿವರಾದ ಶಂಕರನಾಯಕ್‌ರವರು ಕಳಕಳಿಯಿಂದ ಕೆಲಸ ಮಾಡುತ್ತಾರೆ ಎಂದು ನಮಗೆ ಭರವಸೆ ಇದೆ.

ಉಪಾಧ್ಯಕ್ಷರು:- ಮಾನ್ಯ ಬೆಲ್ಲದ್‌ರವರೇ, ಇದು ಗಮನ ಸೆಳೆಯುವ ಸೂಚನೆ. ಮತ್ತೊಬ್ಬರು ಮಾತನಾಡಲಿಕ್ಕೆ ಬರುವುದಿಲ್ಲ. ಮಾನ್ಯ ಮಂತ್ರಿಗಳು ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ತರುತ್ತೇವೆಂದು ಹೇಳಿದ್ದಾರೆ. ಮಾನ್ಯ ಪ್ರಕಾಶ್‌ರವರೂ ಕೂಡ ಆದಷ್ಟು ಬೇಗನೇ ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ನೀವು ಏಕೆ ಕಾಳಜಿ ಮಾಡುತ್ತೀರಿ?

ಶ್ರೀ ಚಂದ್ರಕಾಂತ್ ಬೆಲ್ಲದ್:- ಇದು ಬಹಳ ಅಗತ್ಯವಾಗಿ ತರಬೇಕಾಗಿತ್ತು.

ಶ್ರೀ ಡಿ.ಆರ್. ಪಾಟೀಲ್:- ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ತರುತ್ತೇವೆ ಎಂದು ಮಾನ್ಯ ಮಂತ್ರಿಗಳ ಬಾಯಿಂದ ಹೇಳಿಸಿಬಿಡಿ, ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಹಾಗೆ ಹೇಳಿಬಿಡಿ.

ಶ್ರೀ ಎಂ. ಶಂಕರ್ ನಾಯಕ್:- ಸನ್ಮಾನ್ಯ ಉಪಾಧ್ಯಕ್ಷರೇ, ಇದು ಒಬ್ಬರ ಹಕ್ಕನ್ನು ಇನ್ನೊಬ್ಬರು ಕೀಳತಕ್ಕಂತಹ ಕೆಲಸ. ಸಪೋಸ್ ಒಂದೇ ರಾಜ್ಯದಲ್ಲಿ ಒಬ್ಬ ವಿದ್ಯಾರ್ಥಿ ಶೇಕಡ 85-90 ಅಂಕಗಳನ್ನು....

ಉಪಾಧ್ಯಕ್ಷರು:- ತಿದ್ದುಪಡಿ ಮುಂದಿನ ಅಧಿವೇಶನದೊಳಗೆ ತರುತ್ತೇವೆ ಎಂದು ಭರವಸೆ ಕೊಡಿ ಸಾಕು.

ಡಾ: ಎಂ. ಶಂಕರ್ ನಾಯಕ್:- ಮಾನ್ಯ ಉಪಾಧ್ಯಕ್ಷರೇ, ತಿದ್ದುಪಡಿ ತರುವುದಕ್ಕೆ ಕಾನೂನಿನ ಅಡಚಣೆ ಇದೆ. ಸರ್ಕಾರ ಅದರ ಕಡೆಗೆ ಗಮನ ಹರಿಸಿದೆ. ಮುಂದಿನ ಅಧಿವೇಶನದಲ್ಲಿ ಅದನ್ನೆಲ್ಲಾ ಸರಿಪಡಿಸಿ... ಅವರಿಗೆ ಏನು ಅನಿಸಿಕೆ ಇದೆಯೋ ಅದೇ ಅನಿಸಿಕೆ ನಮ್ಮೆಲ್ಲರಲ್ಲೂ ಇದೆ. ಇದರಲ್ಲಿ ತಾರತಮ್ಯವಾಗುತ್ತಿದೆ. ನಾವು ತಿದ್ದುಪಡಿ ತಂದ ಮೇಲೆ ಅದು ವಿವಾದಕ್ಕೆ ಒಳಗಾಗಬಾರದು, ಕಾನೂನಿನ ಚೌಕಟ್ಟಿನೊಳಗೆ ಮಾಡಬೇಕು ಎನ್ನತಕ್ಕದ್ದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಅವರು ಹೇಳಿದ್ದಕ್ಕೆ ನಾವು ಗಮನ ಹರಿಸಿದ್ದೇವೆ. ಮುಂದಿನ ಅಧಿವೇಶನದಲ್ಲಿ ನಾವು ಅದರ ಬಗ್ಗೆ ತರುತ್ತೇವೆ. ಅದರ ಚರ್ಚೆಯಾಗಲಿ. ಈ ಮನೆಯಲ್ಲಿ ಏನು ಚರ್ಚೆಯಾಗುತ್ತದೋ ಅದರ ಪ್ರಕಾರ ಆಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಸಿ.ಇ.ಟಿ. ಎಗ್ಸಾಮಿನೇಷನ್ ಮಾಡಿದ್ದಾರೆ. ಇದರಲ್ಲಿ ಏನಾಗಿದೆ ಅಂದರೆ ಕೆಲವು ಡೆಂಟಲ್ ಕಾಲೇಜುಗಳಲ್ಲಿ ಸರ್ಕಾರದ ವತಿಯಿಂದ ಏನು ಸೀಟುಗಳನ್ನು ಕಳುಹಿಸಬೇಕೋ ಅದನ್ನು ಕಳುಹಿಸಿಯೇ ಇಲ್ಲ. ಸರ್ಕಾರವೂ ಕಳುಹಿಸುತ್ತಿಲ್ಲ, ಮ್ಯಾನೇಜ್‌ಮೆಂಟಿಗೂ ಪರ್ಮಿಷನ್ ಕೊಟ್ಟಿಲ್ಲ. ಸುಪ್ರೀಂ ಕೋರ್ಟ್ ಆದೇಶ ಇದೆ ಎಂದು, ಈ ಕಡೆ ಸೆಕ್ರೆಟೇರಿಯೇಟ್‌ನವರು ಡಿಸಿಷನ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಹೀಗಾಗಿ ಆ ಸೀಟುಗಳು ಲ್ಯಾಪ್ಸ್ ಆಗುತ್ತಿವೆ. ಆಗ ಮ್ಯಾನೇಜ್‌ಮೆಂಟಿಗೂ ಲಾಭ ಇಲ್ಲ, ಸರ್ಕಾರಕ್ಕೂ ಲಾಭ ಇಲ್ಲ. ತಾವು ಯಾವುದಾದರೂ ರೀತಿಯಿಂದ ಒಂದು ಮೀಟಿಂಗ್ ಆದರೂ ಕರೆದು ತೀರ್ಮಾನ ತೆಗೆದುಕೊಂಡರೆ, ಅಟ್‌ಲೀಸ್ಟ್ ಕೆಲವು ವಿದ್ಯಾರ್ಥಿಗಳಿಗಾದರೂ ಲಾಭವಾಗುತ್ತದೆ. ಇಲ್ಲದಿದ್ದರೆ ಅವು ಲ್ಯಾಪ್ಸ್ ಆಗಿ

ಯಾರಿಗೂ ಕೂಡ ಪ್ರಯೋಜನವಾಗುವುದಿಲ್ಲ. ಸುಮಾರು ಐದು ಡೆಂಟಲ್ ಕಾಲೇಜುಗಳಲ್ಲಿ ಈ ಪ್ರಾಬ್ಲಮ್ ಇದೆ.

ಡಾ: ಎಂ. ಶಂಕರ್‌ನಾಯಕ್:- ಸನ್ಮಾನ್ಯ ಅಧ್ಯಕ್ಷರೇ, ಈಗ ಡೆಂಟಲ್ ಕಾಲೇಜುಗಳಲ್ಲಿ ಗೊಂದಲವಿರುವ ಬಗ್ಗೆ ನಾವು ದಿನನಿತ್ಯ ವೃತ್ತ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅದರಲ್ಲಿ ರೆಕಗನೈಸ್ ಆಗಿರುವ ಮತ್ತು ರೆಕಗನೈಸ್ ಆಗದೇ ಇರತಕ್ಕ ಬೇರೆ ಬೇರೆ ಕಾಲೇಜುಗಳಿವೆ. ವಿದ್ಯಾರ್ಥಿಗಳಿಗೆ ಸಿ.ಇ.ಟಿ. ಮುಖಾಂತರ ಸೀಟು ಅಲಾಟ್ ಆಗಿದೆ. ಆದರೆ ವಿದ್ಯಾರ್ಥಿಗಳು ಅನ್‌ರೆಕಗನೈಜ್ ಕಾಲೇಜಿನಲ್ಲಿ ಹೋಗಿ ಅಡ್ಮಿಷನ್ ಮಾಡಿಕೊಳ್ಳಲಿಕ್ಕೆ ತಯಾರಿಲ್ಲ. ಸಿ.ಇ.ಟಿ.ಯಿಂದ ಅವರಿಗೆ ಸೀಟು ಅಲಾಟ್ ಆದರೂ ಸಹ ಅಲ್ಲಿಗೆ ಹೋಗಿ ಅವರು ಅಡ್ಮಿಷನ್ ಆಗಿಲ್ಲ. ಅದು ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟುಗಳು ಉಳಿದಿವೆ ಎಂಬ ಮಾಹಿತಿಯನ್ನು ನಾವು ತರಿಸುತ್ತಿದ್ದೇವೆ. ಇವತ್ತು ಅಥವಾ ನಾಳೆ ಏನಾದರೂ ಆ ಮಾಹಿತಿ ಬಂದರೆ, ಆ ಮ್ಯಾನೇಜ್‌ಮೆಂಟ್ ಅವರನ್ನು ಕರೆದು ಎಷ್ಟು ಸೀಟುಗಳು ಉಳಿದಿವೆಯೋ ಅದನ್ನು ತುಂಬಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಸರ್ಕಾರ ವತಿಯಿಂದ ಅಂತೂ ಸಿ.ಇ.ಟಿ. ಕೌನ್ಸಲಿಂಗ್ ಪೂರ್ತಿ ಮುಗಿದಿದೆ, ಕಳೆದ ತಿಂಗಳು 28ಕ್ಕೆ ಅದು ಮುಗಿಯಿತು, ಉಳಿದಿರತಕ್ಕಂತಹ ಸೀಟುಗಳನ್ನು ನಾವು 4-5 ದಿವಸ ಕಾಲಾವಕಾಶ ಕೊಟ್ಟು ಯೂನಿವರ್ಸಿಟಿಯಿಂದ ಮ್ಯಾನೇಜ್‌ಮೆಂಟ್‌ನವರು ತುಂಬಲಿಕ್ಕೆ ಹೇಳುತ್ತೇವೆ. ಏಕೆಂದರೆ ಮ್ಯಾನೇಜ್‌ಮೆಂಟ್‌ನವರಿಗೆ ಲಾಸ್ ಆಗುತ್ತದೆ. ಸೀಟು ತುಂಬಲಿಲ್ಲ ಅಂದರೆ ಟ್ಯೂಷನ್ ಫೀ ಅವರಿಗೆ ಸಿಗುವುದಿಲ್ಲ, ಇದರಿಂದ ಮ್ಯಾನೇಜ್‌ಮೆಂಟ್‌ನವರಿಗೆ ಬಹಳ ಕಷ್ಟವಾಗುತ್ತದೆ. ಆ ಒಂದು ಉದ್ದೇಶದಿಂದ ನಾವು ಆ ಕಡೆಗೆ ಗಮನ ಹರಿಸಿದ್ದೇವೆ. ಆ ಮಾಹಿತಿ ಬಂದ ನಂತರ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಆ. ಕೆ.ಜಿ.ಎಫ್. ಪುರಸಭೆಯಲ್ಲಿ ದುರಾಡಳಿತ ಹಾಗು ಭ್ರಷ್ಟಾಚಾರ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್. ಕ್ಷೇತ್ರ):- ಮಾನ್ಯ ಉಪಾಧ್ಯಕ್ಷರೇ, ಕೆ.ಜಿ.ಎಫ್. ಪುರಸಭೆಯಲ್ಲಿನ ದುರಾಡಳಿತ ಹಾಗೂ ಭ್ರಷ್ಟಾಚಾರದಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಪೌರಾಡಳಿತ ರಾಜ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಮಿರಾಜುದ್ದೀನ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ,

" Mal-administration and corruption in the K.G.F. City Municipality, this resulting in harrassment and inconvenience to the public of K.G.F. Town".

ಈ ಮೇಲಿನ ಪ್ರಶ್ನೆಗೆ ಉತ್ತರ ತರಿಸಲು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಅವರನ್ನು ಕೋರಲಾಗಿದ್ದು ಜಿಲ್ಲಾಧಿಕಾರಿ ಅವರು ಸದರಿ ಪ್ರಶ್ನೆಯು ಸಾಮಾನ್ಯ ಸ್ವರೂಪದಾಗಿದ್ದು ಈ ಪ್ರಶ್ನೆ ನಿರ್ದಿಷ್ಟವಾದ ಪ್ರಶ್ನೆ ಆಗಿಲ್ಲದ ಕಾರಣ ಉತ್ತರ ಸಲ್ಲಿಸಲು ಅಸಾಧ್ಯವಾಗಿದೆಯೆಂದು ತಿಳಿಸಿರುತ್ತಾರೆ.

ಕೆ.ಜಿ.ಎಫ್. ನಗರ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಅಥವಾ ಅಧಿಕಾರಿ: ಸಿಬ್ಬಂದಿಯವರು ದುರಾಡಳಿತ ಮತ್ತು ಭ್ರಷ್ಟಾಚಾರ ನಡೆಸಿ, ಕೆ.ಜಿ.ಎಫ್. ಪಟ್ಟಣದ ಸಾರ್ವಜನಿಕರಿಗೆ ಅನಾನುಕೂಲ ಮಾಡಿ ದೌರ್ಜನ್ಯವನ್ನು ಯಾರು ಮಾಡಿದ್ದಾರೆ ಎಂದು ನಿರ್ದಿಷ್ಟವಾಗಿ ಆರೋಪದ